ಪ್ರಬಂಧ

# ದುಂಡೋದರರ ದಂಡಯಾತ್ರೆ!!



**ಲಕ್ಷ್ಮಣ ಬಾದಾಮಿ**

ಕಲೆ: ಸಂತೋಷ್ ಸಸಿಹಿತ್ಲು

ನಮ್ಮ ಸಾಹಿತಿಗಳು ಬಡತನವನ್ನು ಮತ್ತು ಹಸಿದ ಮನುಷ್ಯನನ್ನು ವರ್ಣಿಸುವಾಗ 'ಬೆನ್ನಿಗಂಟಿಕೊಂಡ ಹೊಟ್ಟೆ..!!' ಅಂತ ಹಿಂದೆಲ್ಲ ಹೇಳುತ್ತಿದ್ದರು. ಈಗೇನಾದರೂ ಹೀಗೆ ಹೇಳಿದರೆ ಇದೊಂದು ಭಯಂಕರ ಉತ್ಪ್ರೇಕ್ಷೆಯ ಮಾತು, ಇಲ್ಲವೆ ಹೀಗೆ ಹೇಳಿದ ಸಾಹಿತಿಯ ಕಣ್ಣು ಮಬ್ಬು ಆಗಿರಬೇಕು ಅನ್ನಿಸಿಬಿಡುತ್ತದೆ. ಈಗ ಹಳ್ಳಿ ಪಟ್ಟಣ ಎಲ್ಲ ಕಡೆಯೂ ದುಂಡೋದರರು ಹೆಚ್ಚಾಗಿಯೇ ಕಾಣುತ್ತಾರೆ. ನಮ್ಮ ಕವಿ ಅಡಿಗರ ಕಾಲಕ್ಕೆ ರಾಜಕಾರಣಿಗಳು ಮಾತ್ರ ದುಂಡೋದರರಾಗಿ ಕಾಣಿಸಿರಬೇಕು. ಅದಕ್ಕೇ ಅವರು

**'ಝಣ ಝಣಿಸಿ ರೂಪಾಯಿ ಮಳೆ ಬೀಳುತ್ತಿದೆ**
**ಲಕ್ಷೋಪಲಕ್ಷ ಕಿಸೆ ಕಿಸಿದು ನಿಂತರು ಬಾಯಿ**
**ಗುಂಡೋದರರಿಗೆ ಮಾತ್ರ ದಕ್ಕುತ್ತಿದೆ'**

ಎಂದು ಹೇಳುತ್ತಾರೆ.

ಗೋಪಾಕೃಷ್ಣ ಅಡಿಗರು ಈ ಕವಿತೆ ಬರೆದದ್ದು 1952ರ ಸುಮಾರಿಗೆ. ಅಂದರೆ ಈಗ 70 ವರ್ಷಕ್ಕೂ ಮೇಲಾಗಿದೆ. ಸರಿದು ಹೋದ ಈ 70 ವರ್ಷಗಳಲ್ಲಿ ಝಣಝಣ ರೂಪಾಯಿ ಮಳೆ ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿರಬಹುದು ನೀವೇ ಊಹಿಸಿ! 70 ವರ್ಷ ಬಿಡಿ, ಕೇವಲ 10 ವರ್ಷದಲ್ಲಿ ಎಷ್ಟು ಬದಲಾವಣೆಯಾಗಿದೆ ಗಮನಿಸಿ: 2011-12ರಲ್ಲಿ ನಮ್ಮ ದೇಶದಲ್ಲಿ ಬಡತನದ ಪ್ರಮಾಣ 25.7ರಷ್ಟು ಇದ್ದದ್ದು 2022-23ರ ಹೊತ್ತಿಗೆ 07.2ಕ್ಕೆ ಇಳಿದಿದೆ ಎಂದು ಸಂಶೋಧನಾ ವರದಿಯೊಂದು ಹೇಳಿದೆ. ಅಂದರೆ ಆಗ ಗುಂಡೋದರರ ಕಿಸೆಗೆ ಮಾತ್ರ ಬೀಳುತ್ತಿದ್ದ ಝಣಝಣ ಮಳೆ ಈಗ ಎಲ್ಲರ ಕಿಸೆಗೆ ಬೀಳುತ್ತಿದೆ. ಕಿಸೆ ಭರ್ತಿಯಾದ ಮೇಲೆ 'ಉದರ' ಉಬ್ಬಲಾರದಿದ್ದೀತೇ..? ದುಂಡೋದರರ ಸಂಖ್ಯೆಯಲ್ಲಿ ಈಗಲೂ ಅಗ್ರಗಣ್ಯವಾದವರೆಂದರೆ ರಾಜಕಾರಣಿಗಳೇ. ದುಂಡುದುಂಡಾದ ಉದರವೇ ರಾಜಕಾರಣಿಯ ಮೊದಲ ಅರ್ಹತೆ ಇರಬೇಕು ಎನಿಸುತ್ತದೆ. ಹಳ್ಳಿಯಿಂದ ದಿಲ್ಲಿಯವರೆಗಿನ